**ಸಾಕ್ಷಿಗೆ ದಿನಾಂಕ:11-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. HSP ವಕೀಲರಿಂದ ::**

ನನ್ನ ತಾಯಿ ಸಿದ್ದಮ್ಮ ರವರು ಆರೋಗ್ಯವಾಗಿ ಇರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ವಿವಿಧ ವಯೋಸಹಜ ಕಾಯಿಲೆಗಳು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿ ಸಿದ್ದಮ್ಮ ರವರು ಆರೋಗ್ಯವಾಗಿದ್ದರೂ ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶಗಳು ಹೊರಗೆ ಬರುತ್ತದೆ ಎನ್ನುವ ದುರುದ್ದೇಶದಿಂದ ನಾನು ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಹಾದೇವಪ್ಪ ನನ್ನ ತಂದೆ. ಮಲ್ಲಿಕಾರ್ಜುನಪ್ಪ ರವರು ನನ್ನ ಅಜ್ಜನ ಚಿಕ್ಕಪ್ಪ ಆಗಿರುತ್ತಾರೆ. ನನ್ನ ತಂದೆ ಮತ್ತು ಮಲ್ಲಿಕಾರ್ಜುನಪ್ಪ ರವರು ದಾಖಲಾತಿಗಳಿಗೆ ಸಹಿ ಹಾಕುತ್ತಿದ್ದರೋ ಅಥವಾ ಹೆಬೆಟ್ಟಿನ ಗುರುತು ಹಾಕುತ್ತಿದ್ದರೋ ಎಂದು ನನಗೆ ಗೊತ್ತಿಲ್ಲ. ಸದರಿಯವರ ಸಹಿ ಅಥವಾ ಹೆಬೆಟ್ಟಿನ ಗುರುತು ನನಗೆ ಗುರುತಿಸಲು ಆಗುವುದಿಲ್ಲ ಎಂದರೆ ಸರಿ.

ನಿಪಿ1 ಕ್ರಯಪತ್ರದ ಬಗ್ಗೆ ಈ ದಾವೆ ಹೂಡಿದ ನಂತರ ನನಗೆ ತಿಳಿದು ಬಂದಿರುತ್ತದೆ. ನಿಪಿ1 ಕ್ರಯಪತ್ರದ ಬಗ್ಗೆ ನನ್ನ ತಾಯಿಗೂ ಸಹ ಈ ದಾವೆ ಹೂಡಿದ ನಂತರ ನನಗೆ ತಿಳಿದು ಬಂದಿರುತ್ತದೆ. ನಿಪಿ1 ಕ್ರಯಪತ್ರದ ಬಗ್ಗೆ ನನ್ನ ತಾಯಿಗೆ ಸದರಿ ಕ್ರಯಪತ್ರ ಆದ ದಿನವೇ ತಿಳಿದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ1 ಕ್ರಯಪತ್ರದಲ್ಲಿ ನನ್ನ ತಂದೆ ಹಾಗೂ ಮಲ್ಲಿಕಾರ್ಜುನಪ್ಪ ರವರ ಸಹಿಗಳನ್ನು ಫೋರ್ಜರಿ ಮಾಡಿರುವ ಬಗ್ಗೆ ಇವರೆಗೂ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ನಿಪಿ1 ರ ವಿರುದ್ದ ನಾವು ಇವರೆಗೂ ಯಾವುದೇ ದಾವೆ ಹೂಡಿರುವುದಿಲ್ಲ. ವಾದಿಗಳ ಕುಟುಂಬದವರು ನಮ್ಮ ವಿರುದ್ದ ಪೋಲೀಸರಿಗೆ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿರುವ ಬಗ್ಗೆ ದೂರು ನೀಡಿದ್ದರು ಎಂದರೆ ಇರಬಹುದು. ದಾವಾ ಶೆಡ್ಯೂಲ್ ಸ್ವತ್ತನ್ನು ವಾದಿಗಳ ಕುಟುಂಬದವರು ಖರೀದಿಸಿದ ನಂತರ ಸದರಿ ಆಸ್ತಿಯುಲ್ಲಿ ಅವರೇ ಸ್ವಾಧೀನದಲ್ಲಿ ಇದುದ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಖರೀದಿಯ ಸಮಯದಿಂದ ವಾದಿಯ ಕುಟುಂಬದವರು ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ಅವರ ಹೆಸರಿಗೆ ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ1 ರ ಪ್ರಕಾರ ದಾವಾ ಶೆಡ್ಯೂಲ್ ಸ್ವತ್ತನ್ನು ವಾದಿಗಳ ಕುಟುಂಬದವರು ಖರೀದಿ ಮಾಡಿದ ಕಾರಣ ಅವರೇ

ಅದರ ಕಾನೂನುಬದ್ದ ಮಾಲೀಕರು ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತನ್ನು ಕ್ರಯಕ್ಕೆ ಪೆಡೆದಿರುವ ವಿಚಾರ ನಮಗೆ ತಿಳಿದಿದ್ದರೂ ಸಹ ದಾವಾ ಸ್ವತ್ತನ್ನು ಲಪಟಾಯಿಸುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: